ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ ನ್ಯಾಯಾಲಯ, ಉಡುಪಿ

ಸಿಸಿಃ **6/2018**

ಪಿ.ಡಬ್ಲೂ: **10** ಸಿಡಬ್ಲ್ಯೂಃ **11**

ಸಾಕ್ಷಿದಾರರ ಹೆಸರು : ಪ್ರಭು ಡಿ.ಟಿ
ತಂದೆಯ ಹೆಸರು : ದೇವಪ್ಪ
ವಯಸ್ಸು : **45** ವರ್ಷ
ಉದ್ಯೋಗ : ಡಿವೈಎಸ್.ಪಿ ಗೋಕಾಕ್
ವಾಸಸ್ಥಳ : ಗೋಕಾಕ್

ದಿಃ **16.01.2020** ರಂದು ಸಾಕ್ಷಿಗೆ ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಸರಕಾರಿ ಅಭಿಯೋಜಕರಿಂದಃ

**1.** **2012-2013** ನೇ ಸಾಲಿನಲ್ಲಿ ಬ್ರಹ್ಮಾವರ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಕೋಟಾ ಪೋಲೀಸ್ ಠಾಣಾ ಕ್ರೈಂ ನಂಬ್ರ **208/2012** ರಲ್ಲಿ ನಾನು ತನಿಖೆಯನ್ನು ಮಾಡುತ್ತಿದ್ದಾಗ ಆ ಕೇಸಿನಲ್ಲಿ ಕೋಟಾ ಪೋಲೀಸ್ ಠಾಣಾ ಪಿಎಸ್ಐ ಮತ್ತು ಸಿಬ್ಬಂದಿಯವರು ಸಂಶಯದಿಂದ ನಿತ್ಯಾನಂದ ನಾಯಕ್ ಎಂಬ ಆರೋಪಿಯನ್ನು ವಶಕ್ಕೆ ಪಡೆದು ಹಾಜರುಪಡಿಸಿರುತ್ತಾರೆ. ನಂತರ ಸದ್ರಿ ವ್ಯಕ್ತಿಯನ್ನು ಕೂಲಂಕುಶವಾಗಿ ವಿಚಾರಣೆ ಮಾಡಲಾಗಿ ಈ ಪ್ರಕರಣದಲ್ಲೂ ಸಹಾ ಆರೋಪಿಯೇ ಕಳ್ಳತನ ಮಾಡಿದ್ದಾನೆಂದು ತಿಳಿದುಬಂದಿದ್ದು ನಂತರ ಚಾ.ಸಾ-**10** ರವರ ಸಮಕ್ಷಮ ಆರೋಪಿಯನ್ನು ದಸ್ತಗಿರಿ ಮಾಡಿದ ಬಗ್ಗೆದಸ್ತಗಿರಿ ಮಹಜರನ್ನು ತಯಾರಿಸಿರುತ್ತೇನೆ. ಸದ್ರಿ ದಸ್ತಗಿರಿ ಮಹಜರಿನ ಮೂಲಪ್ರತಿಯನ್ನು ಕೋಟಾ ಪೋಲೀಸ್ ಠಾಣೆಯ ಮೇಲೆ ಹೇಳಿದ ಕ್ರೈಂ ನಂಬ್ರದಲ್ಲಿ ಹಾಜರುಪಡಿಸಿದ್ದು ಅದರ ನಿಜಪ್ರತಿಯನ್ನು ಸಿಸಿ ನಂಬ್ರ **20/17** ರಲ್ಲಿ ಹಾಜರುಪಡಿಸಿದ್ದು ಸಾಕ್ಷಿಯು ಸದ್ರಿ ದಾಖಲೆಯನ್ನು ನೋಡಿ ತನ್ನ ಸಹಿಯನ್ನು ಗುರುತಿಸಿದ್ದು ಸದ್ರಿ ಮಹಜರಿನ ನಿಜಪ್ರತಿಯನ್ನು ನಿ.ಪಿ-**8** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-**8**(ಎ) ಎಂದು ಗುರುತಿಸಿದೆ. ಆ ಕಾಲಕ್ಕೆ ಆರೋಪಿಯ ಬಳಿ ಇದ್ದ **2** ರಶೀದಿಗಳನ್ನು ವಶಕ್ಕೆ ಪಡೆದಿರುತ್ತೇನೆ. ನಂತರ ಆರೋಪಿಯ ಸ್ವಇಚ್ಚಾ ಹೇಳಿಕೆಯನ್ನು ದಾಖಲು ಮಾಡಿದ್ದು ಆ ಹೇಳಿಕೆಯಲ್ಲಿ ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ತಪ್ಪೊಪ್ಪಿಗೆ ಹೇಳಿಕೆಯನ್ನು ನೀಡಿದ್ದು ಅದರಲ್ಲಿ ಆರೋಪಿಯು ತಾನು ಕಳುವು ಮಾಡಿದ ಪ್ರಕರಣದ ಚಿನ್ನದ ಆಭರಣಗಳನ್ನು ಅಡಮಾನ ಇಟ್ಟ ಫೈನಾನ್ಸ್ ಗಳನ್ನು ಮತ್ತು ಸೂಟ್ ಕೇಸ್ ಬಿಸಾಡಿದ ಸ್ಥಳವನ್ನು ತನ್ನ ಜೊತೆ ಬಂದರೆ ತೋರಿಸಿಕೊಡುವುದಾಗಿ ತಿಳಿಸಿರುತ್ತಾನೆ. ತನ್ನ ಹೇಳಿಕೆಯಲ್ಲಿ ತನ್ನ ಜೊತೆ ಸುಂದರ್ ರಾಜ್ ಮತ್ತು ರಾಜೇಶ್ ಎಮ್.ಬಿ ವ್ಯಕ್ತಿಯೂ ಸಹಾ ಇದ್ದರು ಎಂದು ತಿಳಿಸಿರುತ್ತಾನೆ. ತಾವು ಕೆಎ-**20**-ಬಿ-**4927** ಕಾರಿನಲ್ಲಿ ಕಳ್ಳತನ ಮಾಡಿದ ಸ್ಥಳಕ್ಕೆ ಹೋಗಿರುವುದಾಗಿ ತಿಳಿಸಿರುತ್ತಾನೆ. ತದನಂತರ ಆರೋಪಿಯು ನಮ್ಮನ್ನು ಮೇಲೆ ಹೇಳಿದ ಕೋಟಾ ಠಾಣೆಯ ಕ್ರೈಂ ನಂಬ್ರದಡಿಯಲ್ಲಿ ಪ್ರಕರಣಕ್ಕೆ ಉಪಯೋಗಿಸಿದ ಕಾರನ್ನು ತೋರಿಸಿಕೊಟ್ಟಿದ್ದು ಸದ್ರಿ ಕಾರನ್ನು ಮತ್ತು ಸದ್ರಿ ಕಾರಿನಲ್ಲಿದ್ದ ಒಂದು ಕಬ್ಬಿಣದ ರಾಡನ್ನು ಸ್ವಾಧೀನಕ್ಕೆ ಪಡೆದು ಆ ಬಗ್ಗೆ ಮಹಜರನ್ನು ಬರೆದಿರುತ್ತೇನೆ. ಸದ್ರಿ

ಮಹಜರಿನ ನಿಜಪ್ರತಿಯನ್ನು ಈಗಾಗಲೇ ನಿ.ಪಿ-**6** ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ-**6**(ಬಿ) ಎಂದು ಗುರುತಿಸಿದೆ.

**2.** ನಂತರ ಆರೋಪಿಯನ್ನು ರಿಮಾಂಡ್ ವರದಿಯೊಂದಿಗೆ ಮೇಲೆ ಹೇಳಿದ ಕೇಸಿನಲ್ಲಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ವಶಕ್ಕೆ ಪಡೆದ ವಸ್ತುಗಳನ್ನು ಸೊತ್ತುಪಟ್ಟಿಯಲ್ಲಿ ಅಳವಡಿಸಿ ಸೊತ್ತುಪಟ್ಟಿಯನ್ನು ಸಂಬಂದಪಟ್ಟ ನ್ಯಾಯಾಲಯಕ್ಕೆ ರವಾನಿಸಿರುತ್ತೇನೆ.

**3.** ನಂತರ ದಿಃ **02.01.2013** ರಂದು ಈ ಪ್ರಕರಣದ **1** ನೇ ಆರೋಪಿಯಾದ ಸುಂದರ್ ರಾಜ್ ಅವರನ್ನು ನನ್ನ ಸಿಬ್ಬಂದಿಗಳು ಹಾಜರುಪಡಿಸಿದ್ದು ಆತನನ್ನು ಕೂಲಂಕುಷವಾಗಿ ವಿಚಾರಿಸಿ ಆತನ ಕಬೂಲಾತಿ ಹೇಳಿಕೆಯನ್ನು ದಾಖಲು ಮಾಡಿರುತ್ತೇನೆ. ಆತನು ತನ್ನ ಕಬೂಲಾತಿ ಹೇಳಿಕೆಯಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದ ಸೊತ್ತುಗಳನ್ನು ತನ್ನ ಮನೆಯಲ್ಲಿಟ್ಟಿರುವುದಾಗಿ ತನ್ನೊಂದಿಗೆ ಬಂದರೆ ಅವುಗಳನ್ನು ತೋರಿಸಿಕೊಡುತ್ತೇನೆಂದು ಹೇಳಿರುತ್ತಾನೆ. ಆ ಪ್ರಕಾರ ಚಾ.ಸಾ-**6** ಮತ್ತು **7** ರವರನ್ನು ಹಾಜರುಪಡಿಸಿಕೊಂಡು ಸದ್ರಿ **1** ನೇ ಆರೋಪಿಯು ತೋರಿಸಿದಂತೆ ನಾವು ಮತ್ತು ಪಂಚರು ಉಡುಪಿಯ ಬಡಗುಬೆಟ್ಟು ಚಿತ್ಪಾಡಿ ಎಂಬಲ್ಲಿ ಕರೆದುಕೊಂಡು ಹೋಗಿದ್ದು ಅಲ್ಲಿ ಆರೋಪಿಯು ಬೇರೆ ಬೇರೆ ಪ್ರಕರಣಕ್ಕೆ ಸಂಬಂದಪಟ್ಟ ಕೆಲವು ಆಭರಣಗಳನ್ನು ಹಾಗೂ ಈ ಪ್ರಕರಣಕ್ಕೆ ಸಂಬಂದಪಟ್ಟ ಇಸ್ತ್ರಿಪೆಟ್ಟಿಗೆ, ಕ್ಯಾಮರಾ ವನ್ನು ತೋರಿಸಿದ್ದು ಅವುಗಳನ್ನು ನಿ.ಪಿ-**7** ಮಹಜರು ಮುಖೇನ ವಶಕ್ಕೆ ಪಡೆದಿರುತ್ತೇನೆ. ನಿ.ಪಿ-**7** ರಲ್ಲಿನ ಸಾಕ್ಷಿ ಸಹಿಯನ್ನು ನಿ.ಪಿ-**7**(ಬಿ) ಎಂದು ಗುರುತಿಸಿದೆ. ಸಾಕ್ಷಿಯು ಈಗಾಗಲೇ ಗುರುತಿಸಿರುವ ಮುದ್ದೆಮಾಲು **1** ಮತ್ತು **3** ನ್ನು ನೋಡಿ ಗುರುತಿಸಿರುತ್ತಾರೆ.

**4.** ಅದೇ ದಿನ ಈ ಕೇಸಿನ **2** ನೇ ಆರೋಪಿಯಾದ ರಾಜೇಶ್ ಅವರನ್ನು ಸಹಾ ದಸ್ತಗಿರಿ ಮಾಡಿ ಆತನ ಸ್ವಹೇಳಿಕೆಯನ್ನು ದಾಖಲು ಮಾಡಿರುತ್ತೇನೆ. ಸಮಯಾವಕಾಶ ಕಡಿಮೆ ಇದ್ದ ಕಾರಣ **1** ಮತ್ತು **2** ನೇ ಆರೋಪಿಗಳನ್ನು ಮೇಲೆ ಹೇಳಿದ ಕೋಟಾ ಪೋಲೀಸ್ ಠಾಣೆಯ ಕ್ರೈಂ ಗೆ ಸಂಬಂದಪಟ್ಟ ನಾಯಾಲಯದಲ್ಲಿ ರಿಮಾಂಡ್ ವರದಿಯೊಂದಿಗೆ ಹಾಜರುಪಡಿಸಿರುತ್ತೇನೆ. **1** ಆರೋಪಿಯಿಂದ ವಶಕ್ಕೆ ಪಡೆದ ಸೊತ್ತುಗಳ ಬಗ್ಗೆ ಸೊತ್ತುಪಟ್ಟಿಯಲ್ಲಿ ನಮೂದಿಸಿ ಸೊತ್ತುಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

**5.** ದಿಃ **04.01.2013** ರಂದು **2** ನೇ ಆರೋಪಿಯನ್ನು ತನಿಖೆಗಾಗಿ ನ್ಯಾಯಾಲಯದ ಆದೇಶದಂತೆ ಪೋಲೀಸ್ ಅಭಿರಕ್ಷೆಗೆ ಪಡೆದು ಅದೇ ದಿನ ಚಾ.ಸಾ-**6** ಮತ್ತು **9** ರವರನ್ನು ಬರಮಾಡಿಕೊಂಡು **2** ನೇ ಆರೋಪಿಯು ತೋರಿಸಿದ ಮಾರ್ಗದಲ್ಲಿ ಇಲಾಖಾ ಜೀಪಿನಲ್ಲಿ ಮಡಿಕೇರಿಯ ಕುಶಾಲನಗರಕ್ಕೆ ಕರೆದುಕೊಂಡು ಹೋಗಿ ಅಲ್ಲಿ ತನ್ನ ಮನೆಗೆ ಕರೆದುಕೊಂಡು ಹೋಗಿದ್ದು ಅಲ್ಲಿ ಆತನು ಬೇರೆ ಬೇರೆ ಪ್ರಕರಣಕ್ಕೆ ಸಂಬಂದಪಟ್ಟ ಸೊತ್ತುಗಳನ್ನು ಹಾಗೂ ಈ ಪ್ರಕರಣಕ್ಕೆ ಸಂಬಂದಪಟ್ಟಂತೆ **1** ಮೊಬೈಲ್ ಹಾಗೂ ಬ್ಯಾಗನ್ನು ಹಾಜರುಪಡಿಸಿದ್ದು ಅವುಗಳನ್ನು ಪಂಚರ ಸಮಕ್ಷಮ ನಿ.ಪಿ-**9** (ಸಿಸಿ ನಂಬ್ರ **20/17** ರಲ್ಲಿ ನಿ.ಪಿ-**5** ಎಂದು ಗುರುತಿಸಲಾಗಿದೆ)

ಪಂಚನಾಮೆಯಡಿಯಲ್ಲಿ ವಶಕ್ಕೆ ಪಡೆದಿರುತ್ತೇನೆ. ನಿ.ಪಿ-**9** ರಲ್ಲಿನ ಸಾಕ್ಷಿ ಸಹಿಯನ್ನು ನಿ.ಪಿ-**9**(ಎ) ಎಂದು ಗುರುತಿಸಿದೆ. ಮೊಬೈಲ್ ಮತ್ತು ಬ್ಯಾಗನ್ನು ಸಾಕ್ಷಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮುದ್ದೆಮಾಲು **2** ಮತ್ತು **4** ಎಂದು ಗುರುತಿಸಿದೆ. ನಂತರ ಆರೋಪಿಯನ್ನು ಪೋಲೀಸ್ ಅಭಿರಕ್ಷಣೆಯಿಂದ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ವಶಕ್ಕೆ ಪಡೆದ ಸೊತ್ತುಗಳನ್ನು ಸೊತ್ತುಪಟ್ಟಿಯಲ್ಲಿ ಅಳವಡಿಸಿ ಸಂಬಂದಪಟ್ಟ ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆ.

**6.** **1** ಮತ್ತು **2** ನೇ ಆರೋಪಿಯು ನೀಡಿದ ಕಬೂಲಾತಿ ಹೇಳಿಕೆಯಂತೆ ಮೇಲೆ ಹೇಳಿದ ವಸ್ತುಗಳನ್ನು ಅವರು ತೋರಿಸಿದಂತೆ ವಶಕ್ಕೆ ಪಡೆದಿರುತ್ತೇನೆ. **1** ನೇ ಆರೋಪಿಯ ಕಬೂಲಾತಿ ಹೇಳಿಕೆಯ ಸಂಬಂದಪಟ್ಟ ಭಾಗವನ್ನು ಗುರುತಿಸುವ ಉದ್ದೇಶದಿಂದ ಕಬೂಲಾತಿ ಹೇಳಿಕೆಗಳ ನಿಜಪ್ರತಿಯನ್ನು ನಿ.ಪಿ-**10** (ಸಿಸಿ ನಂಬ್ರ **20/17** ರಲ್ಲಿ ನಿ.ಪಿ-**7** ಎಂದು ಗುರುತಿಸಲಾಗಿದೆ) ಎಂದು, ಸಂಬಂದಪಟ್ಟ ಭಾಗವಾದ ಕಳವು ಮಾಡಿದ ಸೊತ್ತುಗಳನ್ನು ನನ್ನ ಮನೆಯಲ್ಲಿರಿಸಿದ್ದು ತಾವು ನನ್ನೊಂದಿಗೆ ಬಂದರೆ ಹಾಜರುಪಡಿಸಿಕೊಡುತ್ತೇನೆ" ಇದನ್ನು ನಿ.ಪಿ-**10**(ಎ) ಎಂದು ಗುರುತಿಸಿದೆ. ನಂತರ ಈ ಪ್ರಕರಣಕ್ಕೆ ಸಂಬಂದಪಟ್ಟ ಸೊತ್ತುಗಳು ದೊರೆತಿರುವ ಬಗ್ಗೆ ಮಣಿಪಾಲ ಪೋಲೀಸ್ ಠಾಣೆಗೆ ಮಾಹಿತಿಯನ್ನು ತಿಳಿಸಿರುತ್ತೇನೆ. ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. **1** ಮತ್ತು **2** ನೇ ಆರೋಪಿಯ ವಿರುದ್ದ ಕೇಸು ಬೇರ್ಪಟ್ಟಿದ್ದು ಈಗಾಗಲೇ ಅವರ ವಿರುದ್ದ ಸಿಸಿ **6/2018** ಎಂದು ಪ್ರತ್ಯೇಕವಾಗಿ ದಾಖಲಾಗಿರುತ್ತದೆ. ಈ ಕೇಸಿನ ಆರೋಪಿಗಳಾದ ಸುಂದರ್ ರಾಜ್ ಅಲಿಯಾಸ್ ಸೋನು ಮತ್ತು ರಾಜೇಶ್ ಎಮ್.ಬಿ ಅವರನ್ನು ನೋಡಿದರೆ ಗುರುತಿಸುತ್ತೇನೆ.

ಸಾಕ್ಷ್ಯವನ್ನು ಕಲಂ **299** ಸಿಆರ್ ಪಿಸಿಯಡಿಯಲ್ಲಿ ದಾಖಲು ಮಾಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇದೆ ಎಂದು ಒಪ್ಪಿದರು

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಎ.ಸಿ.ಜೆ.ಎಮ್, ಉಡುಪಿ